Resignation of Minister For Home

92. Sri G. DUGGAPPA (Bharamasagar).—

Will the Chief Minister be pleased to state :—

(*a*) whether it is a fact that the Home Minister had tendered his resignation ;

(*b*) if so, whether the same was accepted ;

(*c*) in case, resignation has not been accepted the compelling reasons for not accepting the resignation tendered by the Home Minister ;

(*d*) the reasons for tendering resignation ?

A.—Sri B. D. JATTI (Minister for Food and Civil Supplies) [On behalf of SRI S. NIJALINGAPPA (Chief Minister)].—

(*a*) Yes.

(*b*) Yes.

(*c*) Does not arise in view of the reply to (*a*) and (*b*).

(*d*) No reasons have been given in the letter of resignation.

ಶ್ರೀ ಜಿ. ದುಗ್ಗಪ್ಪ.—ಸ್ಪ್ಯಾಲಿ, ಒಳಾಡಳಿತ ಶಾಖೆಯ ಮಂತ್ರಿಗಳಾದ ಶ್ರೀ ರಾಮರಾಯರು ಯಾವ ತಾರೀಖಿನಂದು ರಾಜೀನಾಮೆ ಕೊಟ್ಟರು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಚ್. ಸಿದ್ಧವೀರಪ್ಪ.—ಪಾಯಿಂಟ್ ಆಫ್ ಆರ್ಡರ್ ಸಾರ್, ಒಳಾಡಳಿತ ಶಾಖೆಯ ಮಂತ್ರಿಗಳಾದ ಶ್ರೀ ರಾಮರಾಯರು ಎಂದು ಮಾನ್ಯ ಸದಸ್ಯರು ಹೇಳಿದರು, ಮಾಜಿ ಮಂತ್ರಿಗಳಾದ ಶ್ರೀ ರಾಮರಾಯರು ಎಂದು ಹೇಳಬೇಕು.

ಶ್ರೀ ಜಿ. ದುಗ್ಗಪ್ಪ.—ಮಾಜಿ ಮಂತ್ರಿಗಳಾದ ಶ್ರೀ ರಾಮರಾಯರು ಯಾವಾಗ ರಾಜೀನಾಮೆ ಕೊಟ್ಟರು ಎಂಬುದನ್ನು ತಿಳಿಸುತ್ತೀರಾ ?

† ಶ್ರೀ ಬಿ. ಡಿ. ಜತ್ತಿ.—18-2-1968 ರಂದು.

ಶ್ರೀ ಜಿ. ದುಗ್ಗಪ್ಪ.—ಇವರಿಗೆ ಇದೇ ಸಭೆಯಲ್ಲಿ ಶ್ರೀಮತಿ ನಾಗರತ್ನಮ್ಮನವರು ಮತ್ತು ಶ್ರೀ ಬಿ. ಎಲ್. ಗೌಡರು ಹೂ, ಪುಷ್ಪ ಹಾಕಿದರು ಎಂದು ಆ ಕಾರಣಕ್ಕೋಸ್ಕರ ರಾಜೀನಾಮೆ ಕೊಟ್ಟಿದ್ದಾರೆಯೇ ?

ಶ್ರೀ ಬಿ. ಡಿ. ಜತ್ತಿ.—ನಾನು ಹೇಳಿದ ರಾಜೀನಾಮೆಗೂ ಈ ರಾಜೀನಾಮೆಗೂ ಏನೂ ಸಂಬಂಧವಿಲ್ಲ. (ನಗು)

ಶ್ರೀ ಎಂ. ಎಸ್. ಕೃಷ್ಣನ್.—ತಾವು (ಬ) ಯಲ್ಲಿ ಒಪ್ಪಿಕೊಂಡಿದ್ದೀರಿ ಎಂದು ಹೇಳಿದ್ದೀರಿ. ನಂತರ ಹೇಳುತ್ತೀರಿ—ಕಾರಣ ಏನೂ ಕೋಟ್ಟಿಲ್ಲವೆಂದು. ಕಾರಣ ಕೊಡದೇನೇ ಮಂತ್ರಿಗಳದ್ದಾಗಲಿ, ಅಧಿಕಾರಿಗಳದ್ದಾಗಲಿ, ರಾಜೀನಾಮೆಯನ್ನು ಒಪ್ಪಿಕೊಳ್ಳತಕ್ಕದ್ದು ಸರ್ಕಾರಕ್ಕೆ ಹವ್ಯಾಸವಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಉತ್ತರ ಹೇಳಿದ್ದು ಸರಿ ಇದೆ. ಕಾರಣ ಕೊಟ್ಟಿದ್ದೂ ಸರಿ ಇದೆ. ರಾಜೀನಾಮೆ ಅಕ್ಸೆಪ್ಟ್ ಮಾಡಿದ್ದೂ ಸರಿ ಇದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾಜಿ ಗೃಹ ಮಂತ್ರಿ ಎಂ. ವಿ. ರಾಮರಾಯರು ಎರಡು ಸಂದರ್ಭಗಳಲ್ಲಿ ರಾಜೀನಾಮೆಯನ್ನು ಸರ್ಕಾರಕ್ಕೆ ಹಾಗೂ ರಾಜ್ಯಪಾಲರಿಗೆ ಕೊಟ್ಟಿದ್ದಾರೆ. ಒಂದು ಮಧುಗಿರಿ ಪ್ರಕಾರಣದ ಅಪಾಂತರವನ್ನು ಎದುರಿಸಲಾಗಿವೆ. ಇನ್ನೊಂದನ್ನು ಈ ಸಭೆ ಆರಂಭವಾಗುವ ಹಿಂದಿನ ದಿವಸವೇ ಅದನ್ನು ಅಂಗೀಕಾರ ರಾಜ್ಯಪಾಲರು ಮಾಡಿದ್ದಾರೆಂದು. ಇದಕ್ಕೆ ಯಾವ ಕಾರಣ ಸೂಚಿಸಿ ರಾಜೀನಾಮೆ ಕೊಟ್ಟಿದಾರೆಂದು ಹೇಳುತ್ತೀರಾ ?

ಶ್ರೀ ಬಿ. ಡಿ. ಜತ್ತಿ.— ಈಗಾಗಲೆ ಹೇಳಿದೆ, ಕಾರಣ ಕೊಟ್ಟಿಲ್ಲ. ರಾಜಿನಾಮೆ ಕೊಟ್ಟಿದ್ದಾರೆ ಒಪ್ಪಿಕೊಂಡಿದ್ದೇವೆ. ಅದು 18ನೇ ಫೆಬ್ರುವರಿ 1968.

Sri G. DUGGAPPA.—When did the Chief Minister accept the resignation ?

Sri B. D. JATTI.—On 18th, the ex-Home Minister Sri M. V. Rama Rao submitted resignation through the Chief Minister to Governor. It was recommended the very day by the Chief Minister to the Governor. It was accepted by the Governor on the same day and intimated to the Chief Minister.

ಶ್ರೀ ಕೆ. ಎಚ್. ಪಾಟೀಲ್.—ಸ್ವಾಮಿ, ಕಾರಣಗಳನ್ನು ಕೊಡಲಿಲ್ಲವೆಂದು ಹೇಳಿದ್ದೀರಿ. ಈ ರಾಜಿನಾಮೆಯನ್ನು ಕೊಡುವುದಕ್ಕೆ ಯಾವ ಕಾರಣ ಅವಶ್ಯವಿವೆಯೋ, ಆ ಕಾರಣ ಸಾರ್ವಜನಿಕರಿಂದ ಅಥವಾ ಈ ಸಭೆಯಿಂದ ಮುಚ್ಚಿಡಬೇಕೆನ್ನುವ ಕಾರಣದಿಂದ ಬದ್ಧಪೂರ್ವಕವಾಗಿ ಕಾರಣ ರಹಿತವಾದ ರಾಜಿನಾಮೆಯನ್ನು ತೆಗೆದುಕೊಂಡು ಒಂದು ಒಳನಾಟಕವನ್ನು ಆಡಿದ್ದಾರೆಂದು ನನ್ನ ಅಭಿಪ್ರಾಯ ಇದು ಸರಿಯೇ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಹೇಳಿದಂತೆ ಒಳನಾಟಕವೇನೂ ಇಲ್ಲ. ಅವರು " I hereby tender my resignation " ಎಂದು ಹೇಳಿದ್ದಾರೆ.

Sri H. SIDDAVEERAPPA.—Sir, I want to know when the ex-Home Minister tendered his resignation for the first time after the Madhugiri incident, what are the reasons he has mentioned in that letter. Has he simply stated that 'I hereby tender resignation' or has he assigned any reasons for the resignation ?

Sri B. D. JATTI.—The first resignation, I do not know. I am speaking about the resignation which has been accepted by the Governor.

ಶ್ರೀ ಪಾಟಾಳ್ ನಾಗರಾಜ್.—ಸಾರ್ವಜನಿಕರು ತಿಳಿದಿರುವ ಪ್ರಕಾರ ಮಧುಗಿರಿ ಪ್ರಕರಣದಲ್ಲಿ ತಮ್ಮ ಅಧಿಕಾರಿಗಳ ಅನ್ಯಾಯದ ಬಗ್ಗೆ ವಿರೋಧಪಕ್ಷದವರು ಅವರ ಅನ್ಯಾಯವನ್ನು ಎತ್ತಿಹಿಡಿದ ಮೇಲೆ ಒಂದು ರಾಜಿನಾಮೆಯನ್ನು ಕೊಟ್ಟಿದ್ದಾರೆ. ಇನ್ನೊಂದು ಮಾನ್ಯ ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷರಾದ ಮೇಲೆ ಇವರನ್ನು ಕಾಂಗ್ರೆಸ್ ಕಾರ್ಯದರ್ಶಿಯಾಗಿ ಮಾಡಿದ ಮೇಲೆ ರಾಜಿನಾಮೆ ಕೊಟ್ಟಿದ್ದಾರೆ. ಕಾರ್ಯದರ್ಶಿಯಾದ ಮೇಲೆ ಕಾರ್ಯಗಳು ಬಹಳ ಜಾಸ್ತಿಯಾಗಿರುವುದರಿಂದ ಮಂತ್ರಿಯಾಗಿರುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಇದರಲ್ಲಿ ಯಾವುದನ್ನು ನಂಬೋಣ ಮತ್ತು ಕಾರಣ ಯಾವುದನ್ನು ಅವರು ಸೂಚಿಸಿದ್ದಾರೆ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಸುಮ್ಮನೆ ಗದ್ದಲ ಮಾಡಿಕೊಂಡಿದ್ದಾರೆ. ಎ.ಐ.ಸಿ.ಸಿ. ಯ ಸೆಕ್ರೆಟರಿಯಾಗಿ ಎಂದು ಒಂದು ಲೈನ್ ಕಾರಣ ಇದೆ. ಆ ಮೂಲಕ ರಾಜಿನಾಮೆ ಕೊಟ್ಟಿದ್ದಾರೆ, ಅದನ್ನು ಸರ್ಕಾರ ಒಪ್ಪಿಕೊಂಡಿದೆ.

ಶ್ರೀ ಅಜೀಜ್ ಸೇಟ್.—ಮಾಜಿ ಮಂತ್ರಿಗಳಾದ ಶ್ರೀಮಾನ್ ರಾಮರಾಯರು ಹಿಂದೆ ರಾಜೀನಾಮೆ ಕೊಟ್ಟದ್ದು ಯಾವಾಗ ? ಅನಂತರ ರಾಜೀನಾಮೆ ಕೊಟ್ಟದ್ದು ಯಾವಾಗ ? ಹಿಂದೆ ರಾಜೀನಾಮೆ ಕೊಟ್ಟು ಮನೆಯೊಳಗೇನೇ ಇದ್ದಾಗ ಮಿನಿಸ್ಟರ್ರವರ ಕೆಲಸವನ್ನು ಯಾರು ಮಾಡುತ್ತಿದ್ದರು ?

ಶ್ರೀ ಬಿ.ಡಿ. ಜತ್ತಿ.—ಹಿಂದೆ ಯಾವಾಗ ರಾಜೀನಾಮೆ ಕೊಟ್ಟಿದ್ದರು ಎನ್ನುವುದು ನನಗೆ ಗೊತ್ತಿಲ್ಲ.

ಶ್ರೀ ಎಸ್. ಪಿ. ಅಗ್ನಿಹೋತ್ರಿ.—ಮಾನ್ಯ ರಾಮರಾಯರು ವಿರೋಧಪಕ್ಷದ ಸದಸ್ಯರೆಲ್ಲರ ಸ್ನೇಹ ಹೆಚ್ಚಾಗಿ ಹಿಡಿದುಕೊಟ್ಟುದರಿಂದ ಅವರ ರಾಜೀನಾಮೆ ಕೊಟ್ಟರು ಎನ್ನುವುದು ನಿಜವಲ್ಲವೇ ?

(ಉತ್ತರವಿಲ್ಲ)

ಶ್ರೀ ಕೆ. ಎಚ್. ರಂಗನಾಥ.—ಹಿಂದೆ ರಾಮರಾಯರು ರಾಜೀನಾಮೆ ಕೊಟ್ಟಿದ್ದರು ಎಂದು ಒಂದು ಸಂದರ್ಭದಲ್ಲಿ ಅವರ ಶಾಖೆಯ ಪ್ರಶ್ನೆ ಬಂದಾಗ ತಾವೇ ಉತ್ತರ ಕೊಟ್ಟುದು ನಿಜವಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಆ ಕಾಲಕ್ಕೆ ಆರೀತಿ ವರದಿ ಬಂದಿರಬಹುದು. ಇದರ ವಿಷಯ ನನಗೆ ಹೆಚ್ಚಾಗಿ ಗೊತ್ತಿಲ್ಲ. ಆಗ ನನಗೆ ಆ ಕೆಲಸ ಕೊಟ್ಟರು ಅದರಂತೆ ಇಲ್ಲಿ ಮಾಡಿದೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ರಾಜಿನಾಮೆ ಕೊಟ್ಟರು ಎಂದು ಇಲ್ಲಿ ಹೇಳಿದರು. ಆದರೆ ಯಾವುದೇ ಮಂತ್ರಿಗಳು ಮಂತ್ರಿಮಂಡಲದಲ್ಲಿ ರಾಜೀನಾಮೆ ಕೊಡಬೇಕಾದರೆ ಆ ಮಂತ್ರಿಗಳ ಮೇಲೆ ಏನಾದರೂ ಅಪಾದನೆಗಳಿವೆಯೇ ಅಥವಾ ರಾಜ್ಯದ ಬೊಕ್ಕಸದ ದುಡ್ಡು ಪೋಲಾಗಿದೆಯೇ ಅಥವಾ ರಾಜ್ಯಕ್ಕೆ ಇವರಿಂದೇನಾದರೂ ಅಕ್ರಮಗಳು ನಡೆದಿವೆಯೇ ಇವನ್ನೆಲ್ಲಾ ನೋಡಿಕೊಂಡು ರಾಜೀನಾಮೆ ಅಂಗೀಕಾರ ಮಾಡುವುದಕ್ಕೆ ಮೊದಲು ಮುಖ್ಯಮಂತಿಗಳಾಗಿರುವವರು ಪರಿಶೀಲನೆ ಮಾಡಿ ನೋಡಿ ಆ ನಂತರ ಗೌರ್ನರ್‌ರವರಿಗೆ ಶಿಫಾರಸನ್ನು ಮಾಡಬೇಕು ಎನ್ನುವ ಪದ್ಧತಿ ಇದೆ. ಈ ದೃಷ್ಟಿಯಿಂದ ಇವನ್ನೆಲ್ಲಾ ಗಣನೆಗೆ ತೆಗೆದುಕೊಂಡು ಇವರು ಇಲ್ಲಿ ರಾಜೀನಾಮೆ ಕೊಟ್ಟರೇ ಹಾಗೂ ಮಂತ್ರಿ ಮಂಡಲದಿಂದ ರಾಜೀನಾಮೆ ಕೊಟ್ಟಮೇಲೆ ಈ ನಫೆಗೆ ಬಂದು ಒಂದು ಸ್ಟೇಟ್‌ಮೆಂಟನ್ನೂ ಕೊಡುವ ವಾಡಿಕೆ ಇದೆ. ಇವನ್ನೆಲಾ ಮಾನ್ಯ ಮಂತ್ರಿಗಳಾದ ಜತ್ತಿಯವರ ಗಮನಕ್ಕೆ ತೆಗೆದುಕೊಂಡಿದ್ದಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಇದುವರೆಗೆ ಮಾನ್ಯ ಸದಸ್ಯರು ಹೇಳಿದ ವಿವರಗಳ ಅವಶ್ಯಕತೆಗಳೇನೂ ಇದರಲ್ಲ ಕಾಣುವುದಿಲ್ಲ. ಅವರಿಗೆ ರಾಜೀನಾಮೆ ಕೊಡಬೇಕೆಂದು ಮನಸ್ಸು ಬಂತು ಅದರಂತೆ ಕೊಟ್ಟರು ಅದಿನ್ನು ಸರಕಾರ ಒಪ್ಪಿಕೊಂಡಿದೆ ಮತ್ತು ಮೊದಲನೇ ಸರಿ ರಾಜೀನಾಮೆ ಪತ್ರ ಕೊಟ್ಟ ದ್ದು ನನಗೆ ಗೊತ್ತಿಲ್ಲ. ಎರಡನೇ ಸಾರಿ ಕೊಟ್ಟ ರಾಜೀನಾಮೆ ಪತ್ರ ಅವರು ಕೊಟ್ಟರು. ಅದನ್ನು ಸರಕಾರ ಒಪ್ಪಿಕೊಂಡಿದೆ. ಅದು 18ನೇ ತಾರೀಖು ಫೆಬ್ರುವರಿಯಲ್ಲಿ ಕೊಟ್ಟಿದ್ದಾರೆ.

Mr. DEPUTY SPEAKER.—Sir G. Duggappa may put question No. 93 on behalf of Sri N. G. Halappa.

Allotment of Cars

93. Sri G. DUGGAPPA (Bharamasagara) [on behalf of Sri N. G. HALAPPA (Channagiri)].

Will the Chief Minister be pleased to state :—

(*a*) the total number of cars allotted as Government quota from April 1965 up to the end of October, 1967 ;

(*b*) how many are Fiat and how many are Ambassador cars ;

(*c*) of this the number allotted to the members of the Legislature and non-officials ;

(*d*) the basis on which these allotments are made ;

(*e*) the Minister in-charge of this portfolio ;

(*f*) whether in there is a Government Order governing the allotment of these cars ?

A.— Sri S. NIJALINGAPPA (Chief Minister).—

(*a*) 414.

(*b*) Fiat 159, Ambassador 151; Standard Herald 101.

(*c*) (i) Members of Legislature ... 47
(ii) Non-Officials ... 34

(*d*) Priority, need and urgency. Only Public or Official purpose is taken into consideration.

(*e*) Chief Minister.

(*f*) Yes.